Compt/Uplok/MYS/1545/2020

# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂವೈಎಸ್/1545/2020/ಎಆರ್ಎಲ್ಓ-5 ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ: 09/02/2021.

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (1) ಅನ್ವಯ ವರದಿ***

ವಿಷಯ: ದೂರುದಾರರಾದ ಶ್ರೀ. ಬಿ. ಪ್ರಕಾಶ್‌ರವರಿಗೆ ನಿವೃತ್ತಿ ವೇತನ, ಗಳಿಕೆ ರಜೆ ಹಾಗೂ ಇತರ ಆರ್ಥಿಕ ಉಪಲಬ್ದಗಳನ್ನು ಪಾವತಿ ಮಾಡಲು ವಿಳಂಬವಾಗಿರುವುದಾಗಿ ಸದರಿ ವಿಳಂಬದ ಅವಧಿಗೆ ಪ್ರಸ್ತುತ ಮಾರುಕಟ್ಟೆ ಬೆಲೆಯ ಆಧಾರದಲ್ಲಿ ಪೂರ್ಣ ಹಣ ಸಂದಾಯವಾಗುವ ದಿನಾಂಕದವರೆಗೆ ಸೂಕ್ತ ಬಡ್ಡಿಯನ್ನು ನೀಡುವ ಬಗ್ಗೆ.

****

ಶ್ರೀ. ಬಿ. ಪ್ರಕಾಶ್, ನಿವೃತ್ತ ಪಿ.ಡಿ.ಓ, ತಂದೆ ಲೇ. ಬೋರಪ್ಪ, ಒಲುಮೆ ನಿಲಯ, ಪಿ.ಇ.ಎಸ್ ಬಡಾವಣೆ ಹತ್ತಿರ, ರಿಲಾಯನ್ಸ್ ಟವರ್ಸ್ ರಸ್ತೆಯ ಹಿಂಬಾಗ, 2ನೇ ಹಂತ, 1ನೇ ಅಡ್ಡರಸ್ತೆ, ಅನ್ನಪೂರ್ಣೇಶ್ವರಿ ನಗರ, ಮಂಡ್ಯ ಜಿಲ್ಲೆ (ಇನ್ನು ಮುಂದು "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ ಶ್ರೀ. ಮುನಿರಾಜು ಜಿ. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ), ರವರ ವಿರುದ್ದ ಸಲ್ಲಿಸಿದ ದೂರನ್ನು

ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ನಿವೃತ್ತಿಯಾಗಿ 2 ವರ್ಷ 10 ತಿಂಗಳುಗಳಾಗಿದ್ದರೂ ದೂರುದಾರರಿಗೆ ಸಲ್ಲಬೇಕಾದ ಗಳಿಕೆ ರಜೆ, ಗುಂಪು ವಿಮೆಯ ಮೊಬಲಗನ್ನು ಎದುರುದಾರರು ನಗಧೀಕರಿಸಿ ಕೊಡದೇ ವಿಳಂಬ ಮಾಡಿ ತೊಂದರೆ ನೀಡುತ್ತಿದ್ದು, ಸದರಿ ಹಣ ನಗಧೀಕರಿಸಿಕೊಡಲು ಎದುರುದಾರರು ವಿಷಯ ನಿರ್ವಾಹಕರ ಮುಖಾಂತರ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ ಎಂದು ಆಪಾದಿಸಿರುತ್ತಾರೆ. ಆದುದರಿಂದ, ಎದುರುದಾರರ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಲು ಪ್ರಾರ್ಥಿಸಿರುತ್ತಾರೆ.

3. ದಿ. 05/09/2020ರಂದು ಎದುರುದಾರರು ತನ್ನ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯಲ್ಲಿ ಕರ್ನಾಟಕ ನ್ಯಾಯಮಂಡಳಿ ಆದೇಶ ಸಂಖ್ಯೆ: 6021 ರಿಂದ 6158/2004 ಮತ್ತು 6637 ರಿಂದ 6710/2004 ಹಾಗೂ 1302 ರಿಂದ 1320/2005 ಪ್ರಕರಣ ಆದೇಶ ದಿ. 08/11/2005 ರ ಕರ್ನಾಟಕ ನ್ಯಾಯಮಂಡಳಿ ಆದೇಶದಂತೆ ಮತ್ತು ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ:63:ಗ್ರಾಪಂಕ:2006 ದಿ. 30/04/2008 ರ ಸರ್ಕಾರಿ ಆದೇಶದಂತೆ ನೌಕರರ ಮನವಿ ದಿ. 22/07/2017ರಲ್ಲಿ ಶ್ರೀ. ಬಿ. ಪ್ರಕಾಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಭಾರತೀನಗರ ಗ್ರಾಮ ಪಂಚಾಯಿತಿ ಮದ್ದೂರು ಇವರು ಹಿಂದೆ ಬಿಲ್ ಕಲೆಕ್ಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸಿ ಸೇವಾವಧಿಯನ್ನು ನಿವೃತ್ತಿ ವೇತನ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ ಬ್ಯಾಂಕಿಗೆ ವಂತಿಕೆಯನ್ನು ಜಮಾ ಮಾಡಿ ಎಂದು ಮನವಿ ಸಲ್ಲಿಸಿರುತ್ತಾರೆ.

4. ಅದರಂತೆ ತಾಲ್ಲೂಕು ಪಂಚಾಯಿತಿ, ಕಛೇರಿ ಪತ್ರ ದಿ. 03/08/2017 ರಲ್ಲಿ ನೌಕರರ ಮೂಲ ಸೇವಾ ಪುಸ್ತಕ ಹಾಗೂ ಬ್ಯಾಂಕಿಗೆ ಜಮಾ ಮಾಡಿರುವ ಚಲನ್ ಪ್ರತಿಯೊಂದಿಗೆ ಪ್ರಸ್ತಾವನೆಯನ್ನು ಕಛೇರಿಗೆ ಸಲ್ಲಿಸಲಾಗಿದ್ದು, ತಾಲ್ಲೂಕು ಪಂಚಾಯಿತಿ, ಕಛೇರಿ ಪತ್ರ ದಿ. 31/08/2017ರಲ್ಲಿ ಸದರಿ ನೌಕರರು ದಿ. 31/05/2017ಕ್ಕೆ 60ವರ್ಷ ಪೂರ್ಣಗೊಳಿಸಿರುವುದರಿಂದ ಕರ್ನಾಟಕ ಸರ್ಕಾರಿ ಸೇವಾ ನಿಯಮ 1958 ನಿಯಮ 95(1)ರಂತೆ ದಿ. 31/08/2017ರ ಅಪರಾಹ್ನ ಕರ್ತವ್ಯದಿಂದ ವಯೋ ನಿವೃತ್ತಿಗೊಳಿಸಿ ಆದೇಶಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಮಂಡ್ಯರವರು ದಿ. 04/09/2017 ರಲ್ಲಿ ಪತ್ರ ಸಲ್ಲಿಸಿ ದಾಖಲೆ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ನೀಡುವಂತೆ ಸೂಚಿಸಿರುತ್ತಾರೆ. ಅದರಂತೆ ನಗುವನಹಳ್ಳಿ ಗ್ರಾಮ ಪಂಚಾಯಿತಿ, ಶ್ರೀರಂಗಪಟ್ಟಣ ತಾಲ್ಲೂಕು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ನೀಡಿರುವ ಮಾಹಿತಿ ಹಾಗೂ ನಿವೃತ್ತ ನೌಕರರ ಸೇವಾ ಪುಸ್ತಕದೊಂದಿಗೆ ತಾಲ್ಲೂಕು ಪಂಚಾಯಿತಿಯ ಪತ್ರ ದಿ. 28/10/2017ರಲ್ಲಿ ಕಛೇರಿಗೆ ಸಲ್ಲಿಸಲಾಗಿರುತ್ತದೆ.

6. ನಿವೃತ್ತಿ ನೌಕರರ ದಿ.15/06/2018ರಲ್ಲಿ ಮನವಿ ಸಲ್ಲಿಸಿ ವೇತನ ಮತ್ತು ನಿವೃತ್ತಿ ಉಪದಾನವನ್ನು ಮಂಜೂರು ಮಾಡಿಕೊಡುವಂತೆ ಕೋರಿದ್ದು, ಅದರಂತೆ ತಾಲ್ಲೂಕು ಪಂಚಾಯತ್ ಕಛೇರಿಯ ಪತ್ರ ದಿ. 21/06/2018ರಲ್ಲಿ ಕಛೇರಿಯ ನಿವೃತ್ತಿ ವೇತನ ನೌಕರರ ವೇತನ ಉಪದಾನವನ್ನು ಮಂಜೂರು ಮಾಡಲು ನೌಕರರ ಸೇವಾ ಪುಸ್ತಕವನ್ನು ಕಳುಹಿಸಿ ಕೊಡುವಂತೆ ಕೋರಲಾಗಿತ್ತು ಮತ್ತು ನಿವೃತ್ತಿ ನೌಕರರ ಮನವಿ ದಿ.05/09/2018ರಲ್ಲಿ ನಿವೃತ್ತ ನೌಕರರು ಮತ್ತೆ ಮನವಿ

ಸಲ್ಲಿಸಿ ನಿವೃತ್ತಿ ವೇತನ ಉಪದಾನವನ್ನು ಮಂಜೂರು ಮಾಡಿಕೊಡುವಂತೆ ಕೋರಿರುತ್ತಾರೆ.

7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್, ಮಂಡ್ಯರವರ ಪತ್ರ ದಿ. 02/01/2019 ರಲ್ಲಿ ಶ್ರೀ.ಪ್ರಕಾಶ್ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಭಾರತೀನಗರಗ್ರಾಮ ಪಂಚಾಯಿತಿ ಮದ್ದೂರು ತಾಲ್ಲೂಕು ಇವರು ಬಿಲ್ ಕಲೆಕ್ಟರ್ ಆಗಿ ಈ ಹಿಂದೆ ಸೇವೆ ಸಲ್ಲಿಸಿರುವ ಸೇವಾ ವಿವರದ ಮಾಹಿತಿಯನ್ನು ಕಳುಹಿಸಿಕೊಡುವಂತೆ ಮೂಲ ಸೇವಾ ಪುಸ್ತಕದೊಂದಿಗೆ ಪ್ರಸ್ತಾವನೆಯನ್ನು ನೀಡುವಂತೆ ಸೂಚಿರುತ್ತಾರೆ.

8. ಅದರಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಗುವನಹಳ್ಳಿ ಗ್ರಾಮ ಪಂಚಾಯಿತಿ, ಶ್ರೀರಂಗಪಟ್ಟಣ ತಾಲ್ಲೂಕುರವರ ಪತ್ರ ದಿ. 24/01/2019 ರಲ್ಲಿ ಸದರಿ ನಿವೃತ್ತ ನೌಕರರು ಬಿಲ್ ಕಲೆಕ್ಟರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಕೇಳಿರುವ ಮೂಲ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

9. ನಂತರ ದಿ.05/02/2020ರಲ್ಲಿ ಸದರಿ ನಿವೃತ್ತ ನೌಕರರು ಬಿಲ್ ಕಲೆಕ್ಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವ ಹಾಗೂ ಕೇಳಿರುವ ಮೂಲ ದಾಖಲಾತಿಗಳು ಸೇವಾ ಪುಸ್ತಕಗಳೊಂದಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್, ಮಂಡ್ಯರವರ ಪತ್ರ ದಿ. 14/03/2019ರಲ್ಲಿ ಮತ್ತೊಮ್ಮೆ ವಂತಿಕೆ ಹಾಗೂ ಬಡ್ಡಿ ಹಣವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿದ ಚಲನ್ ಪ್ರತಿಯನ್ನು ಕಳುಹಿಸಿಕೊಡುವಂತೆ ಸೂಚಿರುತ್ತಾರೆ. ಅದರಂತೆ ತಾಲ್ಲೂಕು ಪಂಚಾಯತಿ ಕಛೇರಿಯ ಪತ್ರ ದಿ. 10/04/2019ರಲ್ಲಿ ಮತ್ತೊಮ್ಮೆ ವಂತಿಕೆ ಹಾಗೂ ಬಡ್ಡಿ

ಹಣವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿದ ಚಲನ್ ಪ್ರತಿಯನ್ನು ಲಗತ್ತಿಸಿ ಸಲ್ಲಿಸಲಾಗಿರುತ್ತದೆ.

11. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್, ಮಂಡ್ಯರವರ ಪತ್ರ ದಿ. 28/05/2019ರಲ್ಲಿ ಸದರಿ ನಿವೃತ್ತ ನೌಕರರಿಗೆ ಪತ್ರ ವ್ಯವಹರಿಸಿದ್ದು, ನಿವೃತ್ತಿ ವೇತನ ಸೌಲಭ್ಯದ ಪ್ರಸ್ತಾವನೆಯನ್ನು ಸಿದ್ದಪಡಿಸಬೇಕಾಗಿರುವುದರಿಂದ ಪ್ಯಾಮಿಲಿ ಫೋಟೋ–3, ಪತ್ನಿಯವರ ಹೆಸರು ಮತ್ತು ವಯಸ್ಸಿನ ಬಗ್ಗೆ ಮಾಹಿತಿ, ಮಕ್ಕಳ ಹೆಸರು ಮತ್ತು ವಯಸ್ಸಿನ ಬಗ್ಗೆ ಮಾಹಿತಿಯನ್ನು ನೀಡುವಂತೆ ತಿಳಿಸಲಾಗಿರುತ್ತದೆ.

12. ಅದರಂತೆ ನಿವೃತ್ತಿ ನೌಕರರು ದಿ. 01/08/2019ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರಿಗೆ ದಿ. 28/05/2019ರಲ್ಲಿ ಕೇಳಿರುವ ಮಾಹಿತಿಯನ್ನು ನೀಡಿರುತ್ತಾರೆ.

13. ನಿವೃತ್ತಿ ನೌಕರರ ದಿ. 19/08/2019ರಲ್ಲಿ ಮನವಿ ಸಲ್ಲಿಸಿ ದಿನಗೂಲಿ/ಮಿತಿವೇತನ ಪದವಿದಾರರಾಗಿ ಕರ್ತವ್ಯನಿರ್ವಹಿಸಿ ನಂತರ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡ ಸರ್ಕಾರಿ ನೌಕರರಿಗೆ ನೇರ ನೇಮಕಾತಿಯಿಂದ ನೇಮಕಗೊಂಡ ಇತರೆ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ಗರಿಷ್ಠ 2 ವರ್ಷಗಳ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಅಧಿಕ ಅರ್ಹತಾದಾಯಕ ಸೇವೆಗಾಗಿ ಪರಿಗಣಿಸಲು ಸರ್ಕಾರದ ಆದೇಶದಲ್ಲಿ ಅವಕಾಶವಿದ್ದು ಅದರಂತೆ ದೂರುದಾರರ ಪಿಂಚಣಿ ಲೆಕ್ಕಾಚಾರದ ಉದ್ದೇಶಕ್ಕಾಗಿ ಪರಿಗಣಿಸುವಂತೆ ಕೋರಿರುತ್ತಾರೆ. ತಾಲ್ಲೂಕು ಪಂಚಾಯಿತಿ ಕಛೇರಿಯ ಪತ್ರ ದಿ. 31/08/2019ರಲ್ಲಿ ಸದರಿ ನೌಕರರಿಗೆ ಹಿಂಬರಹ ನೀಡಿ ಈ ಹಿಂದೆ ಬಿಲ್

ಕಲೆಕ್ಟರ್ ಆಗಿ ಸೇವೆ ಸಲ್ಲಿಸಿ ನಂತರ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿ ನೇಮಕಗೊಂಡಿರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಮಂಡ್ಯರವರ ಆದೇಶದಲ್ಲಿ ದಿ. 21/08/1987 ರಿಂದ 23/07/1998ರ ವರೆಗಿನ ಬಿಲ್ ಕಲೆಕ್ಟರ್ ಸೇವೆಯನ್ನು ಕೆ.ಸಿ.ಎಸ್.ಆರ್ ನಿಯಮ 235 ರಂತೆ ನಿವೃತ್ತಿ ಉದ್ದೇಶಕ್ಕಾಗಿ ಅರ್ಹತಾದಾಯಕ ಸೇವೆಯನ್ನಾಗಿ ಪರಿಗಣಿಸಲಾಗಿರುವುದರಿಂದ ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ಸೇವೆ ಸಲ್ಲಿಸಿ ತದನಂತರ ಸೇವೆಯಲ್ಲಿ ಕ್ರಮಬದ್ಧ ಗೊಂಡಿಲ್ಲವಾದ್ದರಿಂದ ಕೆ.ಸಿ.ಎಸ್.ಆರ್ ನಿಯಮ 247(ಎ) ರೀತ್ಯ ಸೌಲಭ್ಯ ನೀಡಲು ಅವಕಾಶವಿಲ್ಲವೆಂದು ಸದರಿ ನಿವೃತ್ತ ನೌಕರರಿಗೆ ಹಿಂಬರಹ ನೀಡಲಾಗಿರುತ್ತದೆ ಹಾಗೂ ಕೂಡಲೇ ದೂರುದಾರರ ನಿವೃತ್ತಿ ಸೌಲಭ್ಯಗಳ ಇತ್ಯರ್ಥಕ್ಕೆ ಸಂಬಂಧಿಸಿದಂತೆ, ಕಛೇರಿಗೆ ಹಾಜರಾಗಿ ನಿವೃತ್ತಿ ಸೌಲಭ್ಯಗಳ ಪ್ರಸ್ತಾವನೆಯ ನಮೂನೆಗಳಿಗೆ ಸಹಿ ಮಾಡುವಂತೆ ತಿಳಿಸಲಾಗಿದ್ದು, ಅದರಂತೆ ಸದರಿ ನಿವೃತ್ತಿ ನೌಕರರು ದಿ. 05/09/2019ರಂದು ಹಾಜರಾಗಿ ನಿವೃತ್ತಿ ವೇತನದ ಪ್ರಸ್ತಾವನೆ ನಮೂನೆಗಳಿಗೆ ಸಹಿ ಮಾಡಿರುತ್ತಾರೆ.

14. ಸದರಿ ಪ್ರಸ್ತಾವನೆಯನ್ನು ತಾಲ್ಲೂಕು ಪಂಚಾಯತಿ ಕಛೇರಿಯ ಪತ್ರ ದಿ. 05/09/2019ರಲ್ಲಿ ದಿ. 06/09/2019ರಂದು ಈ ಕಛೇರಿಯಿಂದ ನೊಂದಣಿ ಅಂಚೆ ಮೂಲಕ ನಿವೃತ್ತಿ ವೇತನದ ಪ್ರಸ್ತಾವನೆಯನ್ನು ಮಹಾಲೇಖಪಾಲರು ಬೆಂಗಳೂರುರವರಿಗೆ ರವಾನಿಸಲಾಗಿರುತ್ತದೆ.

15. ಸದರಿ ಪ್ರಕರಣದಲ್ಲಿ ಉದ್ದೇಶ ಪೂರ್ವಕವಾಗಿ ಯಾವುದೇ ವಿಳಂಬವಾಗಿರುವುದಿಲ್ಲ ಕಛೇರಿಯ ಸಾಮಾನ್ಯ ಕಾರ್ಯವಿಧಾನ ಪತ್ರವ್ಯವಹಾರಗಳಿಂದ ವಿಳಂಬವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

16. ಮುಂದುವರೆದು ಸದರಿ ನಿವೃತ್ತ ನೌಕರರಿಗೆ ದಿ. 29/10/2019 ಮತ್ತು 14/10/2019ರನ್ವಯ ನಿವೃತ್ತಿ ವೇತನದ ಸೌಲಭ್ಯಗಳನ್ನು ಮಹಾಲೇಖಪಾಲರು ಬೆಂಗಳೂರುರವರಿಂದ ಮಂಜೂರು ಮಾಡಲಾಗಿರುತ್ತದೆ ಎಂದು ಪ್ರತಿಯನ್ನು ಲಗತ್ತಿಸಿರುತ್ತಾರೆ. ಬಾಕಿ ಉಳಿದಂತೆ ಗಳಿಕೆ ರಜೆ ನಗಧೀಕರಣ ಮತ್ತು ಜಿ.ಐ.ಎಸ್ ಸೌಲಭ್ಯಗಳಿಗೆ ಸಂಬಂಧಿಸಿದಂತೆ ದಿ. 20/03/2020ರಲ್ಲಿ ಕಛೇರಿ ಆದೇಶ ಮಂಜೂರಾಗಿದ್ದು, ಕೋವಿಡ್-19 ಲಾಕ್‌ಡೌನ್ ಹಿನ್ನಲೆಯಲ್ಲಿ ಖಜಾನೆ-2, ತಾಂತ್ರಿಕ ಸಮಸ್ಯೆಯಿಂದ ವಿಳಂಬವಾಗಿದ್ದು, ದಿ. 31/07/2020ರಲ್ಲಿ ಸದರಿ ಸೌಲಭ್ಯಗಳನ್ನು ಖಜಾನೆ-2ರ ಮೂಲಕ ಪಾವತಿ ಮಾಡಲಾಗಿದ್ದು ಯಾವುದೇ ಬಾಕಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

17. ಈ ಪ್ರಕರಣದಲ್ಲಿ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೋರಲಾಗಿದ್ದು, ದಿ. 21/10/2020ರಂದು ದೂರುದಾರರು ತನ್ನ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಸದರಿ ಪ್ರತ್ಯುತ್ತರದಲ್ಲಿ ಈ ಕೆಳಕಂಡ ದಿನಾಂಕಗಳಂದು 2-3ವರ್ಷ ವಿಳಂಬವಾಗಿ ನಿವೃತ್ತಿ ವೇತನ ಹಾಗೂ ಉಪಲಬ್ದಗಳನ್ನು ಸಂದಾಯವಾಗಿರುವುದಾಗಿ ತಿಳಿಸಿರುತ್ತಾರೆ. ಸದರಿ ಪಾವತಿಯ ದಿನಾಂಕ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ವಿವರ | ವೃತ್ತಿ ದಿನಾಂಕ | ವಿಳಂಬವಾಗಿ ಲಭ್ಯವಾದ ದಿನಾಂಕ | ವಿಳಂಬವಾಗಿ ಪಾವತಿ ಮಾಡಿದ ಅವಧಿ | ಲಭ್ಯವಾಗಿರುವ ಮೊಬಲಗು | ಒಟ್ಟು | ಷರಾ |
|---|---|---|---|---|---|---|---|
| 1 | ಡಿ.ಸಿ.ಆರ್.ಜಿ | 31/08/2017 | 21/11/2019 | 2 ವರ್ಷ 2 ತಿಂಗಳು 20 ದಿನಗಳು | 3,51,000 | 11,70,017/- | ಬ್ಯಾಂಕ್ ಖಾತೆಗೆ ಜಮಾ ಆದ ವಿವರದ ಸ್ಟೇಟ್‌ಮೆಂಟ್ |
| 2 | ಕಮ್ಯುಟೇಷನ್ | 31/08/2017 | 21/11/2019 | 2 ವರ್ಷ 2 ತಿಂಗಳು 20 | 4,17,317 | | |

| | | | | | | | |
|---|---|---|---|---|---|---|---|
| | | | | ದಿನಗಳು | | | ಕಾಫಿಯನ್ನು ಈ ಕೂಡ ಲಗತ್ತಿಸಿ ಕಳುಹಿಸಿಕೊಡಲಾಗಿದೆ. |
| 3 | ಬಾಕಿ ನಿಂತ ಪಿಂಚಣಿ ಮೊಬಲಗು ವಿಳಂಬವಾಗಿ ಪಾವತಿಯಾಗಿದ್ದು | 31/08/2017 | 21/11/2019 | 2 ವರ್ಷ 2 ತಿಂಗಳು 20 ದಿನಗಳು | 4,01,700 | | |
| 4 | ಜಿಐಎಸ್ | 31/08/2017 | 13/08/2020 | 2 ವರ್ಷ 11 ತಿಂಗಳು 12 ದಿನಗಳು | 82,056 | 4,07,217/- | |
| 5 | ಗಳಿಕೆ ರಜೆ | 31/08/2017 | 13/08/2020 | 2 ವರ್ಷ 11 ತಿಂಗಳು 12 ದಿನಗಳು | 3,25,161 | | |
| ಒಟ್ಟು ವಿಳಂಬವಾಗಿ ಪಾವತಿಯಾದ ಮೊಬಲಗು | | | | | | 15,77,234 | |

18. ದೂರುದಾರರಿಂದ ಸರ್ಕಾರಕ್ಕೆ ಪಾವತಿಸಬೇಕಾದ ಯಾವುದೇ ಬಾಕಿಯಾಗಲೀ ಇಲಾಖಾ ವಿಚಾರಣೆಯಾಗಲೀ ಇಲ್ಲದಿದ್ದರೂ ಪಿಂಚಣಿ ಮತ್ತು ಸೌಲಭ್ಯಗಳನ್ನು ನೀಡದೇ ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿರುವ ಸಂಬಂಧವಾಗಿ ದೂರುದಾರರು ಕೆ.ಎ.ಟಿ ನ್ಯಾಯಾಲಯದಲ್ಲಿ ಅರ್ಜಿ ಸಂಖ್ಯೆ: 7406/2018ರಂತೆ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ದಿ. 29/11/2018ರಲ್ಲಿ ಆದೇಶವಾಗಿದ್ದು, ಸದರಿ ಆದೇಶದಲ್ಲಿ 4 ತಿಂಗಳೊಳಗಾಗಿ ದೂರುದಾರರಿಗೆ ಸಲ್ಲಬೇಕಾದ ನಿವೃತ್ತಿ ವೇತನ ಸೌಲಭ್ಯಗಳನ್ನು ಪಾವತಿಸಲು ಆದೇಶವಾಗಿರುತ್ತದೆ. ಆದರೂ ಸದರಿ ಆದೇಶವನ್ನು ಪಾಲನೆ ಮಾಡದೇ ಎದುರುದಾರರು ವಿಳಂಬ ಮಾಡಿ ನ್ಯಾಯಾಲಯದ ಆದೇಶ ಉಲಂಘನೆಯಾಗಿರುತ್ತದೆ ಎಂದು ತಿಳಿಸಿ ಎದುರುದಾರರ ವಿರುದ್ದ ಶಿಸ್ತುಕ್ರಮ ಜರುಗಿಸಲು ಮತ್ತು ವಿಳಂಬವಾಗಿ ಪಾವತಿಸಿರುವ ಮೊಬಲಗಿಗೆ ಸರ್ಕಾರದ ಆದೇಶದಂತೆ ಶೇ. 12 ಬಡ್ಡಿಯನ್ನು ದೊರಕಿಸಿಕೊಡಲು ಪ್ರಾರ್ಥಿಸಿರುತ್ತಾರೆ.

19. ಈ ಪ್ರಕರಣದಲ್ಲಿ ಹಾಜರು ಮಾಡಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದೂರುದಾರರು ದಿ. 31/08/2017ರಂದು ನಿವೃತ್ತಿಯಾಗಿರುವುದು ಕಂಡುಬಂದಿರುತ್ತದೆ. ಆದರೆ ದೂರುದಾರರಿಗೆ ಸಲ್ಲಬೇಕಾದ ಡಿ.ಸಿ.ಆರ್.ಜಿ ಮೊಬಲಗು 3,51,000/- ಕಮ್ಯುಟೇಷನ್ ಮೊಬಲಗು ರೂ. 4,17,317/-, ಬಾಕಿ ನಿಂತ ಪಿಂಚಣಿ ಮೊಬಲಗು ರೂ. 4,01,700/-ಹಣವನ್ನು ದಿ. 21/11/2019ರಂದು ಒಟ್ಟು 2 ವರ್ಷ 2 ತಿಂಗಳು 20 ದಿನಗಳು ವಿಳಂಬವಾಗಿ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ ಮತ್ತು ದೂರುದಾರರಿಗೆ ಸಲ್ಲಬೇಕಾದ ಜಿ.ಐ.ಎಸ್.ಮೊಬಲಗು ರೂ. 82,056/- ಮತ್ತು ಗಳಿಕೆ ರಜೆ ಮೊಬಲಗು ರೂ. 3,25,161/-ಗಳನ್ನು ದಿ. 13/08/2020ರಂದು 2 ವರ್ಷ 11 ತಿಂಗಳು 12 ದಿನಗಳು ವಿಳಂಬವಾಗಿ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ.

20. ಎದುರುದಾರರು ದೂರುದಾರರಿಗೆ ಸಲ್ಲಬೇಕಾದ ನಿವೃತ್ತಿ ವೇತನ ಮತ್ತು ಉಪಧನಗಳನ್ನು ಪಾವತಿ ಮಾಡದ ಕಾರಣ ದೂರುದಾರರು ಗೌರವಾನ್ವಿತ ಕೆ.ಎ.ಟಿಯಲ್ಲಿ ಪ್ರಕರಣ ಸಂಖ್ಯೆ:7406/2018ರಂತೆ ದೂರು ದಾಖಲು ಮಾಡಿದ್ದು, ಸದರಿ ಪ್ರಕರಣದಲ್ಲಿ ದೂರುದಾರರಿಗೆ ಸಲ್ಲಬೇಕಾಗಿದ್ದ ನಿವೃತ್ತಿ ವೇತನ ಹಾಗೂ ಇತರೆ ಉಪಧನಗಳನ್ನು 4 ತಿಂಗಳೊಳಗಾಗಿ ಪಾವತಿ ಮಾಡಬೇಕು ಎಂದು ದಿ. 29/11/2018ರಂದು ಆದೇಶವಾಗಿರುತ್ತದೆ. ಆದರೆ ಎದುರುದಾರರು ವಿಳಂಬವಾಗಿ ಡಿಸಿಆರ್‌ಜಿ, ಕಮ್ಯೂಟೇಷನ್ ಮತ್ತು ಬಾಕಿ ನಿಂತ ಪಿಂಚಣಿ ಮೊಬಲಗನ್ನು ತಡವಾಗಿ ದಿ. 21/11/2019ರಂದು ದೂರುದಾರರಿಗೆ ಪಾವತಿ ಮಾಡಿದ್ದು, ಜಿಐಎಸ್ ಮತ್ತು ಗಳಿಕೆ ರಜೆಯ ಮೊಬಲಗನ್ನು ಇನ್ನೂ

ವಿಳಂಬವಾಗಿ ದಿ. 13/08/2020ರಂದು ಪಾವತಿ ಮಾಡಿರುವುದು ಕಂಡುಬಂದಿರುತ್ತದೆ.

21. ಸರ್ಕಾರಿ ನೌಕರರಿಗೆ ನಿವೃತ್ತಿ ವೇತನ ಮತ್ತು ಇತರೆ ಉಪಧನಗಳನ್ನು ಮಂಜೂರಿ ಮಾಡಲು ವಿಳಂಬವಾದಲ್ಲಿ, ವಿಳಂಬವಾದ ಅವಧಿಗೆ ಬಡ್ಡಿಯನ್ನು ಪಡೆಯಲು ನಿವೃತ್ತ ಸರ್ಕಾರಿ ನೌಕರನು ಅರ್ಹರಾಗಿರುತ್ತಾರೆ. ಆದರೆ ದೂರುದಾರರಿಗೆ ಸದರಿ ನಿವೃತ್ತಿ ವೇತನ ಹಾಗೂ ಇತರೆ ಉಪದಾನಗಳನ್ನು ವಿಳಂಬವಾಗಿ ಪಾವತಿ ಮಾಡಿರುವ ಬಗ್ಗೆ ಸದರಿ ವಿಳಂಬದ ಅವಧಿಗೆ ಯಾವುದೇ ಬಡ್ಡಿ ಹಣವನ್ನು ಮಂಜೂರು ಮಾಡಿರುವುದಿಲ್ಲ. ಈ ಬಗ್ಗೆ ಮಾನ್ಯ ಸರ್ವೋಚ್ಚನ್ಯಾಯಾಲಯವು ಹಲವು ತೀರ್ಪುಗಳನ್ನು ನೀಡಿದ್ದು, ಸದರಿ ನ್ಯಾಯಾಲಯದ ತೀರ್ಪುಗಳು ಈ ಕೆಳಕಂಡಂತಿದೆ.

1) ಮಾನ್ಯ ಸರ್ವೋಚ್ಛ ನ್ಯಾಯಾಲಯವು State of Kerala & others v/s M.Padmanabhan Nair [(1985) 1 SCC 429] ಪ್ರಕರಣದಲ್ಲಿ ಹೀಗೆ ಹೇಳಿದೆ-

> "Pension and gratuity are no longer any bounty to be distributed by the Government to its employees on their retirement but have become, under the decisions of this Court, valuable rights and property in their hands and any culpable delay in settlement and disbursement thereof must be visited with the penalty of payment of interest at the current market rate till actual payment."

2) D.D.Tewari (dead) through LRs v/s Uttar Haryana Bijli Vitran Nigam Ltd., & others [(2014) 8 SCC 894] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಹೀಗೆ ಹೇಳಿದೆ –

> "6. It is an undisputed fact that the appellant retired from service on attaining the age of superannuation on 31/10/2006 and the order of the learned single Judge after adverting to the relevant facts and the legal positions has given the direction to the respondent employer to pay the erroneously withheld pensionary benefits and the gratuity amount to the **legal representatives of the deceased**

> **employee without awarding interest for which the appellant is legally entitled, therefore, this court has to exercise its appellant jurisdiction as there is a miscarriage of justice in denying the interest to be paid or payable by the employer from the date of the retirement of deceased employee till the date of payment as per the aforesaid legal principle laid down by this court in the judgment referred to supra. We have to award interest at the rate of 9% per annum both on the amount of pension due and the gratuity amount, which are to be paid by the respondent**." (Emphasis supplied)

3) S.K.Dua v/s State of Haryana & another [(2008) 3 SCC 44] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೀಗೆ ಹೇಳಿದೆ –

> "14. In the circumstances, *prima facie*, we are of the view that the grievance voiced by the appellant appears to be well founded that he would be entitled to interest on such benefits. **If there are statutory Rules occupying the field, the appellant could claim payment of interest relying on such rules. If there are administrative instructions, guidelines or norms prescribed for the purpose, the appellant may claim benefit of interest on that basis**. But even in absence statutory rules, administrative instructions or guidelines, an employee can claim interest under Part III of the Constitution relying on Articles 14, 19 & 21 of the Constitution. The submission of the learned counsel for the appellant, that retiral benefits are not in the nature of 'bounty' is, in our opinion, well founded and needs no authority in support thereof. In that view of the matter, in our considered opinion, the High Court was not right in dismissing the petition in limine even without issuing notice to the respondent." (Emphasis supplied)

4) ಮೇಲೆ ಉಲ್ಲೇಖಿಸಿದ ಪ್ರಕರಣಗಳಲ್ಲಿನ ತೀರ್ಪುಗಳನ್ವಯ ಸರ್ಕಾರಿ ನೌಕರನಿಗೆ ನಿವೃತ್ತಿ ವೇತನ ಹಾಗೂ ಇತರೆ ಉಪದಾನಗಳನ್ನು ಮಂಜೂರು ಮಾಡಲು ವಿಳಂಬವಾದಲ್ಲಿ, ವಿಳಂಬವಾದ ಅವಧಿಗೆ ಬಡ್ಡಿಯನ್ನು

ನೀಡುವುದು ಅವಶ್ಯವಾಗಿರುತ್ತದೆ ಎಂದು ಘನನ್ಯಾಯಾಲಯವು ತೀರ್ಮಾನಿಸಿರುತ್ತದೆ.

5) ದೂರುದಾರರು ಮದ್ದೂರು ತಾಲ್ಲೂಕು ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ದಿ. 31/08/2017ರಂದು ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ;

6) ಕರ್ನಾಟಕ ನಾಗರೀಕ ಸೇವಾ ನಿಯಮಗಳ ಅಧ್ಯಾಯ 21ರಲ್ಲಿ "APPLICATIONS FOR AND SANCTION OF PENSIONS" ಬಗ್ಗೆ ಹೇಳಿದೆ. ನಿಯಮ 321 ಈ ಕೆಳಗಿನಂತಿದೆ–

> **"321.** (1) The Head of the Office shall obtain from the retiring non-gazetted Government servant the particulars in Form 1-B one year before the date of his retirement.
>
> (2) A Gazetted Government servant shall submit the particulars in Form 1-B one year in advance of his retirement to the Accountant General who shall build up his pension records. In respect of Gazetted Government servants whose pay and allowances are not authorised by the Accountant General but are drawn by the Head of the Office procedure specified in sub-rule (1) shall be followed.
>
> (3) The particulars mentioned in Form 1-B shall be sent along with other pension documents to the Accountant General at least two months before the date of retirement of the Government servant.
>
> (4) In cases of retirement on retiring pension under rule 285 the particulars mentioned in Form 1-B shall be obtained after the date of receipt of issue of notice by the Government servant for such retirement or in cases of retirement on payment of salary in lieu of notice immediately after the issue of orders thereof.

[(5) xxx] deleted w.e.f.15/02/2003

(6) The Accountant General (Accounts and Entitlement) shall send to the Government and the respective Heads of Department on 31st January and 31st July each year a list of Gazetted Officers who are due to retire within next twelve to eighteen months indicating against each name whether the service books of the particular officer is available or not.

(7) The Head of the Department shall on receipt of the list immediately arrange to obtain the service register wherever wanting. He shall forward the service register and the particulars in Form 1-B to the Accountant General within one month from the date of receipt of the list. Thereafter the Head of the Department shall enquire with the Accountant General once in a quarter whether any particulars are required by him for processing of pension papers. He shall ensure that the intimation of pension entitlement is received from the Accountant General atleast three months before the date of retirement and arrange for the communication of the sanction of the Head of the Department or Government, as the case may be, for pension to the Accountant General two weeks before the date of retirement. He shall also be responsible for forwarding the departmental no due certificate to the Accountant General along with the sanction. In respect of Government servants who are promoted to the Gazetted cadre in the last year of their service the Head of the Department shall, immediately after such promotion forward to the Accountant General their service registers and the particulars in Form 1-B without waiting for the list of retiring Gazetted Government servants. The Accountant General shall send the intimation of issue of final pension payment orders 15 days in advance of the date on which the Government servant is due to retire (so that the retiring Government servant will have his pension payment on the date of his retirement) and also a copy to the Head of the Department. Head of

> the department shall watch the receipt of this intimation. The pension case has to be shown as pending and pursued till the issue of pension payment order."

22. ಸದರಿ ದೂರಿನಲ್ಲಿ ದೂರುದಾರರ ಬಾಪ್ತು ಪಿಂಚಣಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಮದ್ದೂರುರವರು 05/08/2019ರಂದು ಮಹಾಲೇಖಪಾಲಕರು, ಕರ್ನಾಟಕ ಬೆಂಗಳೂರು ನಿವೃತ್ತಿ ವೇತನಾ ಪರಿಶೀಲನಾ ವಿಭಾಗಕ್ಕೆ ಕಳುಹಿಸಿರುವುದು ಕಂಡುಬಂದಿರುತ್ತದೆ. ದೂರುದಾರರು ದಿ. 31/08/2017ರಂದು ನಿವೃತ್ತಿ ಹೊಂದಿದ್ದು, ಆದರೆ ಎದುರುದಾರರು ಸದರಿ ಪ್ರಸ್ತಾವನೆಯನ್ನು ವಿಳಂಬವಾಗಿ ದಿ. 05/08/2019ರಂದು ಸಲ್ಲಿಸಿ ಕರ್ತವ್ಯಲೋಪವೆಸಗಿರುವುದು ಕಂಡುಬಂದಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ(ವಿಶೇಷ)/101/ಪಿಇಎನ್/2018 ದಿ. 08/12/2018 ರಲ್ಲಿ ಪಿಂಚಣಿ ಪ್ರಕರಣಗಳನ್ನು ನಿಗಧಿತ ಕಾಲಾವಧಿಯೊಳಗೆ ಚುರುಕಾಗಿ ಮತ್ತು ತ್ವರಿತವಾಗಿ ಇತ್ಯರ್ಥಗೊಳಿಸುವ ಬಗ್ಗೆ ನಿರ್ದೇಶನವನ್ನು ನೀಡಿರುತ್ತದೆ. ಸದರಿ ಸುತ್ತೋಲೆಯು ಈ ಕೆಳಕಂಡಂತಿರುತ್ತದೆ.

1. ಸರ್ಕಾರಿ ನೌಕರನು ಚಾಲ್ತಿಯಲ್ಲಿರುವ ನಿವೃತ್ತಿ ವೇತನ ಪಾವತಿ ಆದೇಶ (Pension Payment Order) ಇಲ್ಲದೆ ವಯೋನಿವೃತ್ತಿ ಹೊಂದಬಾರದೆಂಬುದು ಸರ್ಕಾರ ಘೋಷಿತ ನೀತಿಯಾಗಿದೆ.
2. ಆದಾಗ್ಯೂ, ಸರ್ಕಾರಿ ನೌಕರರ ಮತ್ತು ಅಧಿಕಾರಿಗಳ ನಿವೃತ್ತಿ ವೇತನ ಪ್ರಕರಣಗಳನ್ನು ನಿಗಧಿತ ಕಾಲಾವಧಿಯೊಳಗೆ ಇತ್ಯರ್ಥಗೊಳಿಸದೆ ತೀರಾ ವಿಳಂಬ ಮಾಡಲಾಗುತ್ತಿದೆ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿವೆ. ನಿಗದಿತ ಕಾಲಾವಧಿಯೊಳಗೆ ಮಹಾಲೇಖಪಾಲರಿಗೆ ಕಳುಹಿಸುವ ಮಹತ್ವವನ್ನು ತಿಳಿಯದಿರುವುದು ಎದ್ದು ಕಾಣುತ್ತದೆ. ಆದುದರಿಂದ, ಸದರಿ ಸೂಚನೆಗಳನ್ನು ಮತ್ತೊಮ್ಮೆ ಒತ್ತಿಹೇಳುವ ಅವಶ್ಯಕತೆ ಇದೆಯೆಂದು ಸರ್ಕಾರವು ಮನಗಂಡಿದೆ.
3. **ಆದಕಾರಣ, ಇನ್ನು ಮುಂದೆ ವಯೋನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರ ನಿವೃತ್ತಿ ವೇತನ ದಾಖಲೆಗಳನ್ನು 12 ತಿಂಗಳು ಮುಂಚಿತವಾಗಿ**

(ಪ್ರಸ್ತುತ ಅನುಸರಿಸುತ್ತಿರುವ 6 ತಿಂಗಳ ಅವಧಿಯ ರೂಢಿಗತ ಪದ್ಧತಿಯನ್ನು ಮಾರ್ಪಡಿಸಿ) ತಯಾರಿಸಲು ಪ್ರಾರಂಭಿಸಿ ಹಾಗೆ ತಯಾರಿಸಿದ ಸಂಪೂರ್ಣ ದಾಖಲೆಗಳನ್ನು ವಯೋ ನಿವೃತ್ತಿಗೆ ಕನಿಷ್ಠ 3 ತಿಂಗಳ ಮುಂಚಿತವಾಗಿ ಮಹಾಲೇಖಪಾಲರಿಗೆ ಕಡ್ಡಾಯವಾಗಿ ಕಳುಹಿಸುವ ಮತ್ತು ವಯೋನಿವೃತ್ತಿ ಹೊಂದಲಿರುವ ಪತ್ರಾಂಕಿತ ಸರ್ಕಾರಿ ಅಧಿಕಾರಿಗಳ ಸಂಬಂಧದಲ್ಲಿ ನಮೂನೆ 7–ಎ ರಲ್ಲಿ ಅವಶ್ಯಕ ಮಾಹಿತಿಯನ್ನು, ಮಂಜೂರಾತಿಯೊಂದಿಗೆ ವಯೋ ನಿವೃತ್ತಿಯ ದಿನಾಂಕಕ್ಕೆ ಒಂದು ತಿಂಗಳ ಮುಂಚಿತವಾಗಿ ಮಹಾಲೇಖಪಾಲರಿಗೆ ಕಡ್ಡಾಯವಾಗಿ ಕಳುಹಿಸುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದೆಂದು ಈ ಮೂಲಕ ಸೂಚಿಸಲಾಗಿದೆ.

4. ಮೇಲಿನ ಸೂಚನೆಗಳನ್ನು ಕಛೇರಿ ಮುಖ್ಯಸ್ಥರ ಗಮನಕ್ಕೆ ತಕ್ಷಣವೇ ತರುತ್ತಾ, ಅವುಗಳನ್ನು ಚಾಚೂತಪ್ಪದೆ ಪಾಲಿಸುವಂತೆ ನಿರ್ದೇಶನ ನಿಡಲು ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳನ್ನು ಮತ್ತು ಇಲಾಖಾ ಮುಖ್ಯಸ್ಥರನ್ನು ಕೋರಲಾಗಿದೆ.
5. ನಿವೃತ್ತಿ ವೇತನವನ್ನು ತಡವಾಗಿ ಪಾವತಿಸಿದಲ್ಲಿ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ ಹಾಗೆ ಪಾವತಿಸಬೇಕಾದ ಬಡ್ಡಿಯನ್ನು ವಿಳಂಬಕ್ಕೆ ಕಾರಣರಾದಂತ ನಿವೃತ್ತಿ ವೇತನ ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರದಿಂದ ಅಥವಾ ಸಂಬಂಧಪಟ್ಟ ನೌಕರರಿಂದ ವಸೂಲಿ ಮಾಡಬೇಕಾಗುತ್ತದೆ. ಅಲ್ಲದೆ, ಅಂತಹ ವಿಳಂಬಕ್ಕೆ ಕಾರಣರಾದಂತಹ ಅಧಿಕಾರಿ ಮತ್ತು ನೌಕರರು ಶಿಸ್ತು ಕ್ರಮಕ್ಕೂ ಬದ್ಧರಾಗುತ್ತಾರೆಂಬ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದೆಂದು ಒತ್ತಿ ಹೇಳಲಾಗಿದೆ.

23. ಮೇಲೆ ತಿಳಿಸಿದ ಸರ್ಕಾರದ ಸುತ್ತೋಲೆಯಲ್ಲಿ ವಯೋ ನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರ ನಿವೃತ್ತಿ ವೇತನ ದಾಖಲೆಗಳನ್ನು 12 ತಿಂಗಳ ಮುಂಚಿತವಾಗಿ ತಯಾರಿಸಿ ಸಂಪೂರ್ಣ ದಾಖಲೆಗಳನ್ನು ವಯೋ ನಿವೃತ್ತಿಗೆ ಕನಿಷ್ಟ ಮೂರು ತಿಂಗಳ ಮುಂಚಿತವಾಗಿ ಮಹಾಲೇಖಪಾಲಕರಿಗೆ ಕಡ್ಡಾಯವಾಗಿ ಕಳುಹಿಸುವ ಬಗ್ಗೆ ನಿರ್ದೇಶನವನ್ನು ನೀಡಲಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ದೂರುದಾರರು ದಿ. 31/08/2017ರಂದು ನಿವೃತ್ತಿ ಹೊಂದಿರುತ್ತಾರೆ. ಸದರಿ

ಸುತ್ತೋಲೆಯ ಪ್ರಕಾರ ಎದುರುದಾರರು ಮಹಾಲೇಖಪಾಲಕರಿಗೆ ನಿವೃತ್ತಿಯ ಮೂರು ತಿಂಗಳುಗಳು ಮುಂಚಿತವಾಗಿ ಅಂದರೆ ಕನಿಷ್ಠ ಪಕ್ಷ 30/05/2017ರಲ್ಲಿ ಸದರಿ ನಿವೃತ್ತಿ ವೇತನ ಮಂಜೂರಾತಿ ಮಾಡುವ ಬಗ್ಗೆ ಮಹಾಲೇಖಪಾಲಕರಿಗೆ ದಾಖಲೆಗಳನ್ನು ಸಲ್ಲಿಸಬೇಕಾಗಿತ್ತು. ಆದರೆ ಎದುರುದಾರರು ಸುಮಾರು 2 ವರ್ಷಗಳು ವಿಳಂಬವಾಗಿ ದಿ. 05/08/2019ರಂದು ದೂರುದಾರರ ನಿವೃತ್ತಿ ವೇತನ ಮಂಜೂರಾತಿಯ ಬಗ್ಗೆ ದಾಖಲೆಗಳನ್ನು ಮಹಾಲೇಖಪಾಲಕರಿಗೆ ವಿಳಂಬವಾಗಿ ಕಳುಹಿಸಿ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

24. ದೂರುದಾರರು ಸೇವೆಯಿಂದ ವಯೋ ನಿವೃತ್ತಿಹೊಂದಿ ಸುಮಾರು 2 ವರ್ಷ 11 ತಿಂಗಳು ಕಳೆದ ನಂತರ ನಿವೃತ್ತಿ ವೇತನ, ಗಳಿಕೆ ರಜೆ ಮತ್ತು ಇತರ ಆರ್ಥಿಕ ಉಪಲಬ್ದಗಳನ್ನು ವಿಳಂಬವಾಗಿ ಪಾವತಿ ಮಾಡಿದ್ದು, ಸದರಿ ವಿಳಂಬಕ್ಕೆ ದೂರುದಾರರು ಯಾವುದೇ ರೀತಿ ಹೊಣೆಗಾರರಾಗಿರುವುದಿಲ್ಲ. ಸದರಿ ಸರ್ಕಾರಿ ಸುತ್ತೋಲೆ ಸಂಖ್ಯೆ: ಆಇ(ವಿ)199ಪಿಇಎನ್ 93 ದಿ. 13/09/1994:ಆಇ (ವಿ) 92 ಪಿಇಎನ್ 95 ದಿ. 17/06/1995 ಮತ್ತು ಆಇ (ವಿ)1 ಪಿಇಎನ್ 03 ಬೆಂಗಳೂರು ದಿ. 21/08/2003ರನ್ವಯ ತಡವಾಗಿ ಪಾವತಿಯಾದ ಪಿಂಚಣಿ, ಉಪದಾನ ಮತ್ತು ರಜೆಯ ನಗಧೀಕರಣ ಇವುಗಳ ಮೇಲೆ ಬಡ್ಡಿಯನ್ನು ಪಡೆಯಲು ದೂರುದಾರರು ಅರ್ಹರಾಗಿರುತ್ತಾರೆ.

25. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ದೂರುದಾರರಿಗೆ ನಿವೃತ್ತಿ ವೇತನ, ಗಳಿಕೆ ರಜೆ ನಗಧೀಕರಣ ಹಾಗೂ ಇತರೆ ಆರ್ಥಿಕ ಉಪಲಬ್ದಗಳನ್ನು ಮಂಜೂರು ಮಾಡುವಲ್ಲಿ ವಿಳಂಬವಾಗಿರುವುದು ಸ್ಪಷ್ಟವಾಗಿ ಕಂಡು ಬರುವ ಕಾರಣ ಮೇಲೆ

ಹೇಳಿದ ಸರ್ಕಾರಿ ಆದೇಶ ಹಾಗೂ ಮೇಲೆ ಉಲ್ಲೇಖಿಸಿದ ತೀರ್ಪುಗಳನ್ವಯ ಸದರಿ ವಿಳಂಬಕ್ಕೆ ಬಡ್ಡಿಯನ್ನು ಪಡೆಯಲು ದೂರುದಾರರು ಅರ್ಹರಾಗಿರುವುದರಿಂದ ದೂರುದಾರರಿಗೆ ಸದರಿ ವಿಳಂಬದ ಅವಧಿಗೆ ಬಡ್ಡಿಯನ್ನು ಪ್ರಸ್ತುತ ಮಾರುಕಟ್ಟೆ ಬೆಲೆಯ ಆಧಾರದಲ್ಲಿ ಪೂರ್ಣ ಹಣ ಸಂದಾಯವಾಗುವ ದಿನಾಂಕದವರೆಗೆ ಸೂಕ್ತ ಬಡ್ಡಿಯನ್ನು ನೀಡಲು ಕ್ರಮ ಕೈಗೊಳ್ಳುವಂತೆ, ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗಾಗಿ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

11/2/21

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು–2,
9/2/21 ಕರ್ನಾಟಕ ರಾಜ್ಯ.